ಮಾನ್ಯ ಮಾಡಿರುವ ದುಡ್ಡು ಕಣ್ರಿ. ದೇಶಕ್ಕೆ ಅವಮಾನ ಅಲ್ಲವಾ? ಈ ಸಣ್ಣ ವಿಷ್ಯವನ್ನು ತಗೊಂಡು ಎಲ್ಲೆಲ್ಲಿಗೋ ಕನೆಕ್ಟ್ ಮಾಡ್ತೀರಲ್ಲ, ಟಿಕೇಟ್ ತಗೊಂಡು ಗಾಡಿ ಮುಂದೆ ಹೋಗೋಕೆ ಬಿಡಿ. ಟಿ.ಸಿ.ಗೆ ಕಂಪ್ಲೆಂಟ್ ಕೊಡ್ತೀನಿ. ಯಾವನಿಗಾದರೂ ಕೊಡಿ. ಕಮೀಷನರಿಗೆ ಕೊಡಿ, ಫಸ್ಟ್ ಟಿಕೇಟ್ ಕೊಡಿ. ಈ ಸೂಳೆಮಕ್ಕಳು ಸರ್ಕಾರದವರು ನಮಗೇನು ಸರಿಯಾಗಿ ಸಂಬಳ ಕೊಡ್ತಾರ? ಮೊನ್ನೆ ನಾವು ಕೆಲಸ ನಿಲ್ಲಿಸಿ ಸತ್ಯಾಗ್ರಹ ಮಾಡುವಾಗ ಸಂಬಳ ಇಲ್ಲ ಎಂಥದೂ ಇಲ್ಲ. ನಮ್ಮ ಹೆಂಡತಿ ಮಕ್ಕಳು ಉಪವಾಸ ಇದ್ದಾಗ ಯಾರಾದರೂ ಮಾತಾಡಿದ್ರಾ? ಕೊಡಿ ಹೋಗಿ, ಮೊದಲು ಟಿಕೇಟ್ ತಗೋಳ್ಳಿ ಹೇ ತಗಳೋ, ತಗಳಯ್ಯ...

ಶವರಿನಿಂದ ಅವಳ ಮೈಮೇಲೆ ಬೀಳುತ್ತಿದ್ದ ನೀರು ನೊರೆಯೊಡನೆ ಸೇರಿ ಇಳಿಯುತ್ತಿತ್ತು.



ನಿಮ್ಮ ಹೆಸರು?

ಪುನರ್ವಸು.

ಒಂದು ಸಣ್ಣ ವಿಷಯವನ್ನು ಅಷ್ಟು ಗಹನವಾಗಿ ಪರಿಗಣಿಸಿ ನೀವು ಮಾತಾಡಿದ ರೀತಿ ಮೆಚ್ಚುವಂತಹದ್ದು. ಜನಗಳ ನಡುವೆ ಮಾತಾಡುವುದಕ್ಕೆ ಧೈರ್ಯಬೇಕು.

ನೀವು?

ಕಿರಣ ಅಂಥ ನನ್ನ ಹೆಸರು. ನಿಮ್ಮ ಕಾಲೇಜಿನಲ್ಲಿ ಜುವಾಲಜಿ ಡಿಪಾರ್ಟ್‌ಮೆಂಟಲ್ಲಿ ಗೆಸ್ಟ್ ಲೆಕ್ಚರರ್ ಆಗಿ ಸೇರಿಕೊಂಡಿದೀನಿ. ನಿನ್ನೆಯಷ್ಟೇ ಜಾಯಿನ್ ಆದೆ. ಇಲ್ಲೇ ಹತ್ತನೇ ಮೈಲು ಊರು.

ಹೌದಾ, ಓಹ್, ವಿಶ್ ಯು ಆಲ್ ದ ಬೆಸ್ಟ್

ಥ್ಯಾಂಕ್ಯು.

ನೀವು ಬಸ್ಸಿನಲ್ಲಿ ಅಷ್ಟೊಂದು ಮಾತಾಡಿ ಕೊನೆಗೆ ನೋಟು ಕೊಟ್ಟು ಟಿಕೇಟ್ ತೆಗೆದುಕೊಂಡದ್ದು ಸೋಲು ಅನ್ನಿಸಲಿಲ್ಲವಾ? ನಾನಂತೂ ತುಂಬಾ ಎಕ್ಸೈಟ್ ಆಗಿದ್ದೆ. ಆದರೆ, ಯು ಟರ್ನ್ ತೆಗೆದುಕೊಂಡಿತು.

ನೀವೂ ಅದೇ ಬಸ್ಸಿನಲ್ಲಿಯೇ ಇದ್ರಾ? ಮೊನ್ನೆ ನನ್ನ ಫ್ರೆಂಡ್ ಮನೇಲಿ ಒಂದು ಚಿಕ್ಕ ಪಾರ್ಟಿ ಇತ್ತು. ನನ್ನ ಗಾಡಿಯ ಕೀ ಯಾರೋ ಒಳಗೆ ಇಟ್ಟು ಹೊರಗಡೆಯಿಂದ ಲಾಕ್ ಮಾಡಿದ್ದರು. ಗಾಡಿಯನ್ನು ಅಲ್ಲೇ ಬಿಟ್ಟು ಬಸ್ಸಲ್ಲಿ ವಾಪಸ್ಸಾಗಿ, ಡ್ಯೂಟಿ ಮುಗಿಸಿಕೊಂಡು, ಎರಡನೇ ಕೀ ತೆಗೆದುಕೊಂಡು ಗಾಡಿ ತರುವುದಕ್ಕೆ ಹೋಗ್ತಾ ಇದ್ದೆ. ಅಲ್ಲ, ಯಾರಾದರೂ ಒಬ್ಬರು ನನ್ನ ಪರ ಮಾತಾಡಿದ್ದಿದ್ದರೆ ಆ ಕಂಡಕ್ಟರ್‌ಗೆ ಬುದ್ಧಿ ಕಲಿಸಬಹುದಿತ್ತು. ಎಲ್ಲ ಪ್ಯಾಸೆಂಜರ್ಸ್ ಅವನಿಗೆ ಸಪೋರ್ಟ್ ಮಾಡಿದರು.

ಹೌದು, ನಾನೇ ಇಷ್ಟಪಟ್ಟದ್ದು. ನಾನೇ ಅವರ ಸ್ನೇಹವನ್ನು ಬಯಸಿ ಅವರ ಜೊತೆ ಆತ್ಮೀಯತೆಯನ್ನು ಬೆಳೆಸಿಕೊಂಡದ್ದು. ಇಬ್ಬರ ನಡುವೆ ಒಂಥರದ ವೇವ್ ಲೆಂಥ್ ಇತ್ತು. ನಿತ್ಯದ ಒಡನಾಟ, ಭೇಟಿ, ಸನಿಹ, ಸಲಿಗೆ, ಸ್ನೇಹ ಬಾಳ ಪಯಣದಲ್ಲಿ ಸಂಗಾತಿಯಾಗುವ ತನಕ ಮುಂದುವರೆಯಿತು. ಆದರೆ ಯಾಕೆ ಹೀಗೆ ಈ ಥರ. ಮದುವೆಗೂ ಮುನ್ನ ಏನೆಲ್ಲ ಆದರ್ಶ, ಕನಸುಗಳು, ಈಗ ನನ್ನ ಬಗ್ಗೆ ಒಂದೇ ಕಾಳಜಿ. ಅಪ್ಪ, ಅಮ್ಮ, ಅವನ ಕುಟುಂಬದವರು. ನಾನು ಯಾವ ಲೆಕ್ಕ ಇಲ್ಲ. ನನ್ನದೇ ತಪ್ಪು. ಕನ್ನಡಿಯಲ್ಲಿ ಕಂಡದ್ದನ್ನು ನಿಜ ಅಂದುಕೊಂಡೆ. ಹುಚ್ಚಿ ಏನೇನೋ ಅಂದುಕೋಬೇಡ. ಎಲ್ಲರ ಜೊತೆಯಲ್ಲಿ ಇದ್ದೇ ನಮ್ಮತನವನ್ನು ಉಳಿಸಿಕೊಳ್ಳಬೇಕು. ಪ್ರೀತಿಯನ್ನು ಪ್ರತಿಸಲ ಸಾಬೀತುಪಡಿಸಬೇಕೆಂದು ಯಾಕೆ ಬಯಸಬೇಕು? ನಿಜವಾದದ್ದು ಅಂತರ್ಗತವಾಗಿ ಇರುತ್ತೆ. ಅದು ವ್ಯಕ್ತಗೊಳ್ಳುತ್ತಿದ್ದರೂನು ನಿತ್ಯದ ಒಡನಾಟದಲ್ಲಿ ತುಂಬ ಸಾಮಾನ್ಯವಾಗಿ ಬೆರೆತುಹೋಗಿರುತ್ತೆ.

ಸ್ನಾನ ಮುಗಿಸಿ, ಕಾಲೇಜಿಗೆ ರೆಡಿಯಾಗಿ ಕನ್ನಡಿಯ ಮುಂದೆ ನಿಂತುಕೊಂಡಳು. ಇಲ್ಲ, ನಾನು ಎಂದಿಗೂ ಕನ್‌ವಿನ್ಸ್ ಆಗಬಾರದು. ನನ್ನ ಬದುಕು ನನ್ನದು. ನಾನು ಅಂದುಕೊಂಡ ರೀತಿಯೇ ಇರಬೇಕು. ಇವರೆಲ್ಲರ ಚಾಕ್ರಿ ಮಾಡಿಕೊಂಡು ನಾನ್ಯಾಕೆ ಇರಲಿ. ಇಲ್ಲ, ಆಗುವುದಿಲ್ಲ. ಗಂಡ ಪುನರ್ವಸುಗೆ ನಾನು ನನ್ನ ಫ್ರೆಂಡ್ ಮನೆಗೆ ಹೋಗಿ ನಂತರ ಕಾಲೇಜಿಗೆ ಬರುವೆ, ಸೋ ನಾನು ಇವೊತ್ತು ಬೇಗ ಹೋಗ್ತೀನಿ ಎಂದು ತನ್ನ ಸ್ಕೂಟರನ್ನು ಚಾಲು ಮಾಡಿದಳು. ಆದರೆ, ತನ್ನ ಸ್ನೇಹಿತೆಯ ಮನೆಯ ಹಾದಿಯನ್ನು ಬಿಟ್ಟು ಬೇರೆ ದಿಕ್ಕಿಗೆ ತನ್ನ ಸ್ಕೂಟರನ್ನು ತಿರುಗಿಸಿದಳು. ಮಗಳು ಸುಪರ್ಣ ತನ್ನ ಅಮ್ಮನನ್ನು ಬಿಗಿಯಾಗಿ ಹಿಡಿದು ಕುಳಿತಿದ್ದಳು. ಅವಳನ್ನು ಶಾಲೆಯ ಆವರಣದ ಒಳಗೆ